# ಪರಿಸರಸ್ನೇಹಿ ಡೆನಿಮ್



ಜೀನ್ಸ್ ಉಡುಪನ್ನೇ ಹೋಲುವ ಆದರೆ ಹೆಚ್ಚು ಪರಿಸರ ಸ್ನೇಹಿಯಾದ ಡೆನಿಮ್ ಉಡುಪು ಈಗ ಫ್ಯಾಷನ್ ಜಗತ್ತಿನಲ್ಲಿ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ. ಧರಿಸಲು ಆರಾಮದಾಯಕ, ಸುಕ್ಕು ನಿಯಂತ್ರಣ ಗುಣ, ಆಕರ್ಷಕ ಲುಕ್, ವೈವಿಧ್ಯಮಯ ಉಡುಗೆ, ಪ್ಯಾಂಟ್, ಶರ್ಟ್, ಹಾಫ್ ಪ್ಯಾಂಟ್, ಕೋಟ್, ಜಾಕೆಟ್.. ಹೀಗೆ ಹಲವು ಬಗೆಯಲ್ಲಿ ಡೆನಿಮ್ ಇಂದು ಫ್ಯಾಷನ್ ಟ್ರೆಂಡ್ ಆಗಿ ಯುವಕ–ಯುವತಿಯರನ್ನು ಸೆಳೆಯುತ್ತಿದೆ.

■ ಉಮಾ ಅನಂತ್

ಜೀನ್ಸ್ ಉಡುಗೆ ಯುವಕ ಯುವತಿಯರ ಮೆಚ್ಚು. ಆದರೆ ಇದೀಗ ಜೀನ್ಸ್ ಉಡುಪನ್ನೂ ಮೀರಿ ಜೀನ್ಸ್ ಅನ್ನೇ ಹೋಲುವ ಡೆನಿಮ್ ಉಡುಗೆ ಜನಪ್ರಿಯತೆಯ ಹಾದಿ ಹಿಡಿದಿದೆ. ಇದಕ್ಕೆ ಕಾರಣ ಡೆನಿಮ್ ಉಡುಗೆಯ ಬಣ್ಣ ಮಾಸದ ಗುಣ, ನಿರಿಗೆ ರಹಿತ ಸ್ವಭಾವ, ರಾಸಾಯನಿಕ ಬಳಸದೆ ಉತ್ಪಾದಿಸಿದ 'ಪರಿಸರ ಸ್ನೇಹಿ' ಬಟ್ಟೆ, ಮೇಲಾಗಿ ಮನತಣಿಸುವ ವೈವಿಧ್ಯಗಳು.

ಇದಕ್ಕಾಗಿಯೇ ಇಂದು ಸಿನಿಮಾ ನಟನಟಿಯರು, ಮಾಡೆಲ್‌ಗಳು, ಸೆಲೆಬ್ರಿಟಿಗಳು, ಕ್ರೀಡಾಪಟುಗಳು ಅಷ್ಟೇ ಏಕೆ ಫ್ಯಾಷನ್ ಪ್ರಿಯರು ಡೆನಿಮ್ ಉಡುಗೆಗಳ ಬೆನ್ನು ಹತ್ತಿದ್ದಾರೆ. ಇದು ಧರಿಸಲು ಆರಾಮದಾಯಕ, ಫ್ಯಾಷನ್ ಹಾಗೂ ಟ್ರೆಂಡಿ ಲುಕ್ ಕೊಡುತ್ತದೆ, ಕೈಗೆಟಕುವ ಬೆಲೆಯಲ್ಲೂ ಲಭ್ಯ ಎನ್ನುವುದು ಡೆನಿಮ್ ಉಡುಗೆಗಳು ಹೆಚ್ಚು ಬೇಡಿಕೆ ಪಡೆದುಕೊಳ್ಳುತ್ತಿರಲು ಕಾರಣ. ಅಲ್ಲದೆ ಕ್ಯಾಶುವಲ್ ಉಡುಪಾಗಿ, ನಿತ್ಯವೂ ಕಚೇರಿಗೆ ತೆರಳುವ ಮಹಿಳೆ–ಪುರುಷರಿಗೆ ಡೆನಿಮ್ ಉಡುಗೆ ಸೂಕ್ತ.

ಡೆನಿಮ್ ಉಡುಪು ಧರಿಸಿ ಇನ್ನಷ್ಟು ಸ್ಟೈಲಿಷ್ ಆಗಬೇಕಿದ್ದರೆ ಡೆನಿಮ್ ಕೋಟ್, ಜಾಕೆಟ್, ಶೂ. ಕೂಡ ಧರಿಸಬಹುದು. ಉಡುಗೆ ತೊಡುಗೆ ಅಲ್ಲದೆ ಬ್ಯಾಗ್, ಶೂಗಳಂತಹ ಆ್ಯಸ್ಸಸರೀಸ್ ಕೂಡ ಡೆನಿಮ್‌ನಲ್ಲಿ ಲಭ್ಯ.

ಡೆನಿಮ್ ಉಡುಪು ಎಂದರೆ ಅದರ ನಿರ್ವಹಣೆ ಕಷ್ಟ ಎಂಬ ಭಾವನೆ ಅನೇಕರಲ್ಲಿದೆ. ಆದರೆ ಇದೀಗ ಫ್ಯಾಷನ್ ಟ್ರೆಂಡ್ ಆಗಿರುವ ಡೆನಿಮ್ ಸುಕ್ಕು ರಹಿತವಾಗಿದ್ದು ಎಲ್ಲ ಕಾಲಕ್ಕೂ ಸೂಕ್ತ ಎನಿಸಿದೆ. ಕಾಟನ್ ಅನ್ನು ಬಹುಪಾಲು ಕಚ್ಚಾ ಉತ್ಪನ್ನವಾಗಿ ಹೊಂದಿರುವ ಡೆನಿಮ್ ಉಡುಪು ಹಿತವಾದ ಅನುಭವವನ್ನೇ ನೀಡುತ್ತದೆ. ಹೀಗಾಗಿ ಡೆನಿಮ್ ಉಡುಗೆಗಳಿಗೆ ಈಗ ಬೇಡಿಕೆಯೂ ಹೆಚ್ಚುತ್ತಿದೆ,

ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಅಜ್ಜಿಯವರೆಗೂ ಡೆನಿಮ್ ಉಡುಗೆ ಆರಾಮದಾಯಕ. ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಡೆನಿಮ್ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಡೆನಿಮ್.  ಸಿಂಥೆಟಿಕ್ ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಡೆನಿಮ್ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರವರೆಗೆ ಯಾರು ಬೇಕಾದರೂ ಡೆನಿಮ್ ಬಟ್ಟೆ ಧರಿಸಿ ಖುಷಿ ಪಡಬಹುದು. ಡೆನಿಮ್ ಉಡುಪಿನ ಬೆಲೆ 100 ರೂಪಾಯಿಯಿಂದ ಆರಂಭವಾಗಿ 10 ಸಾವಿರ ರೂಪಾಯಿಗಳವರೆಗೂ ಇದೆ.

'ಡೆನಿಮ್ ಬಟ್ಟೆ ತಯಾರಿಸಲು ವಿವಿಧ ಗಿಡಗಳ ಉತ್ಪನ್ನವನ್ನು ಬಳಸಿದ್ದೇವೆ. ನ್ಯಾಚುರಲ್ ಇಂಡಿಗೊ, ಮಾಡ್ಡರ್, ರೀಮ್, ಇಮೋದಿ ಹಾಗೂ ಹರ್ದಾ ಎಂಬ ಮರಗಳ ಸತ್ವವನ್ನು ಉಪಯೋಗಿಸಿ ಬಟ್ಟೆ ತಯಾರಿಸಲಾಗಿದೆ. ಜತೆಗೆ ನೈಸರ್ಗಿಕ ಡೈಯಿಂಗ್‌ನಿಂದ ಡೆನಿಮ್ ಬಟ್ಟೆ ವಿಶಿಷ್ಟವಾಗಿ ನಿಲ್ಲುತ್ತದೆ. ಫ್ಯಾಷನ್ ನಿಟ್ಟಿನಲ್ಲೂ ಡೆನಿಮ್ ಮೇಲುಗೈ

